| Mob.No: 9448196313 / 9483731925 | Email ID: registraruasm@gmail.com |
|---|---|

ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ಮಂಡ್ಯ
ಕುಲಸಚಿವರ ಕಛೇರಿ, ವಿ.ಸಿ. ಫಾರಂ, ಮಂಡ್ಯ-571 405
UNIVERSITY OF AGRICULTURAL SCIENCES, MANDYA
Office of the Registrar, V.C.Farm Campus, Mandya- 571 405

ಸಂ: ಕೃವಿವಿ,ಮಂಡ್ಯ/ ಕುಲಸಚಿವರು/ಡಿಪ್ಲೊಮಾ(ಕೃಷಿ)ಪ್ರವೇಶ/ /2026-27 ದಿನಾಂಕ 17.06.2026

# ಪರಿಷ್ಕೃತ ಅಧಿಸೂಚನೆ

ವಿಷಯ: ಡಿಪ್ಲೊಮಾ (ಕೃಷಿ) ಕೋರ್ಸ್‌ಗೆ (ಎರಡು ವರ್ಷ) 2026-27ನೇ ಶೈಕ್ಷಣಿಕ ವರ್ಷಕ್ಕೆ ಅರ್ಜಿಯನ್ನು ಸಲ್ಲಿಸುವ ಅವಧಿಯನ್ನು ವಿಸ್ತರಿಸಿರುವುದರ ಬಗ್ಗೆ

ಉಲ್ಲೇಖ: 1) ಕೃವಿವಿ.ಮಂಡ್ಯ/ಕುಲಸಚಿವರು/ಡಿಪ್ಲೊಮಾ(ಕೃಷಿ)ಪ್ರವೇಶ/97 /2026-27 ದಿನಾಂಕ 16.05.2026
2) ಶಿಕ್ಷಣ ನಿರ್ದೇಶಕರು, ಕೃವಿವಿ, ಮಂಡ್ಯ ಇವರ ಶಿಫಾರಸ್ಸಿನ ದಿನಾಂಕ 17.06.2026.
3) ಮಾನ್ಯ ಕುಲಪತಿಗಳು, ಕೃವಿವಿ, ಮಂಡ್ಯ ಇವರ ಅನುಮೋದನೆ ದಿನಾಂಕ 17.06.2026.

*******

ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ಮಂಡ್ಯ ಅಧೀನದಲ್ಲಿರುವ ಕೃಷಿ ಮಹಾವಿದ್ಯಾಲಯ, ವಿ.ಸಿ. ಫಾರಂ, ಮಂಡ್ಯದಲ್ಲಿ 2026-27ನೇ ಶೈಕ್ಷಣಿಕ ವರ್ಷದಲ್ಲಿ ಎರಡು ವರ್ಷದ ಡಿಪ್ಲೊಮಾ (ಕೃಷಿ) ಕೋರ್ಸ್‌ಗೆ ನಿಗದಿತ ನಮೂನೆಯಲ್ಲಿ ಅರ್ಜಿಗಳನ್ನು ಸಲ್ಲಿಸುವ ಅವಧಿಯನ್ನು ದಿನಾಂಕ 16.05.2026 ರಿಂದ 15.06.2026 ರ ವರೆಗೆ ನೀಡಲಾಗಿತ್ತು.

ಮುಂದುವರೆದು, ಎರಡು ವರ್ಷಗಳ ಡಿಪ್ಲೊಮಾ (ಕೃಷಿ) ಕೋರ್ಸ್‌ಗೆ ಅರ್ಜಿ ಸಲ್ಲಿಸುವ ಅವಧಿಯನ್ನು ದಿನಾಂಕ 17.06.2026 ರಿಂದ 01.07.2026ರ ವರೆಗೆ ವಿಸ್ತರಿಸಲಾಗಿದೆ.

ಅರ್ಜಿ ಹಾಗೂ ಮಾಹಿತಿ ಪುಸ್ತಕವನ್ನು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ಮಂಡ್ಯ - 571405, ವೆಬ್‌ಸೈಟ್ www.uasmandya.edu.in ನಲ್ಲಿ ಡೌನ್‌ಲೋಡ್ ಮಾಡಬಹುದು. ಈ ರೀತಿ ವೆಬ್‌ಸೈಟ್ ಮುಖಾಂತರ ಪಡೆದು ಭರ್ತಿಮಾಡಿದ ಅರ್ಜಿಗಳನ್ನು ಅರ್ಜಿಯ ನಿಗದಿತ ಶುಲ್ಕವನ್ನು ಡಿ.ಡಿ. ರೂಪದಲ್ಲಿ ಲಗತ್ತಿಸಿ ದಿನಾಂಕ. 01.07.2026 ರೊಳಗೆ ಕಳುಹಿಸಿಕೊಡಬೇಕು. ದಿನಾಂಕ 01.07.2026ರ ನಂತರ ಡಿ.ಡಿ. ಯನ್ನು ಪಡೆದು ಸಲ್ಲಿಸುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

**ಅರ್ಜಿ ಶುಲ್ಕ:**

- ಸಾಮಾನ್ಯ ವರ್ಗದವರಿಗೆ ರೂ. 600/-, ಪ.ಜಾ./ಪ.ಪಂ./ಪ್ರವರ್ಗ-1 ರವರಿಗೆ ರೂ. 300/-ಆಗಿದ್ದು, ರಾಷ್ಟ್ರೀಕೃತ ಬ್ಯಾಂಕ್‌ಗಳ (Nationalized Bank) ಮೂಲಕ ಡಿ.ಡಿ.ಯನ್ನು Comptroller, UAS, Mandya ಇವರ ಹೆಸರಿನಲ್ಲಿ ಪಡೆದು ಎಲ್ಲಾ ಅಗತ್ಯ ಅಡಕಗಳೊಂದಿಗೆ ಭರ್ತಿ ಮಾಡಿದ ಅರ್ಜಿಗಳನ್ನು ಕುಲಸಚಿವರು, ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ಮಂಡ್ಯ - 571 405 ಇಲ್ಲಿಗೆ ದಿನಾಂಕ 01.07.2026ರ (ಸಂಜೆ 4.00 ಗಂಟೆ) ಒಳಗೆ ತಲುಪುವಂತೆ ಖುದ್ದಾಗಿ ಅಥವಾ ಅಂಚೆ ಮೂಲಕ ಕಳುಹಿಸಬಹುದು.

ಆದೇಶದ ಮೇರೆಗೆ

17/6/2026
ಕುಲಸಚಿವರು
ಕುಲಸಚಿವರು
ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ಮಂಡ್ಯ
ವಿ.ಸಿ. ಫಾರಂ, ಮಂಡ್ಯ - 571405

**ಪ್ರತಿಗಳು:-**

1. ಶಿಕ್ಷಣ ನಿರ್ದೇಶಕರು, ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ಮಂಡ್ಯ.
2. ಡೀನ್ (ವಿದ್ಯಾರ್ಥಿ ಕಲ್ಯಾಣ) ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ಮಂಡ್ಯ.
3. ಡೀನ್ (ಕೃಷಿ), ಕೃಷಿ ಮಹಾವಿದ್ಯಾಲಯ, ವಿ.ಸಿ.ಫಾರಂ, ಮಂಡ್ಯ.
4. ಪ್ರಾಂಶುಪಾಲರು, ಡಿಪ್ಲೊಮಾ (ಕೃಷಿ), ಕೃಷಿ ಮಹಾವಿದ್ಯಾಲಯ, ವಿ.ಸಿ.ಫಾರಂ, ಮಂಡ್ಯ.
5. ಸಹಾಯಕ ಕುಲಸಚಿವರು, ಕೃಷಿ ಮಹಾವಿದ್ಯಾಲಯ, ವಿ.ಸಿ.ಫಾರಂ, ಮಂಡ್ಯ.